ಸಾಕ್ಷಿಯನ್ನು ದಿನಾಂಕ **02-04-2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ವಿ.ಎಸ್.ಕೆ. ವಕೀಲರಿಂದ.**

ವಾದಿ ಎಷ್ಟು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಓದಿರುವುದಿಲ್ಲ ಸಹಿ ಅಷ್ಟೆ ಮಾಡುತ್ತಾರೆ ಎಂದು ಹೇಳುತ್ತಾರೆ. ಓದಿ ಹೇಳಿದರೆ ಅರ್ಥ ಮಾಡಿಕೊಳ್ಳುವ ತಿಳುವಳಿಕೆ ವಾದಿಗೆ ಇದೆ ಎಂದರೆ ಸರಿಯಲ್ಲ. ವಾದಿಗೆ ದೃಷ್ಠಿ ಚೆನ್ನಾಗಿದೆ ಎಂದರೆ ಸರಿ. ಈ ದಾವೆ ಸಲ್ಲಿಸಲು ವಕೀಲರಿಗೆ ವಾದಿ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಗೆ, ಕಮಾಲೆ ಖಾಯಿಲೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅದರೆ ವಾದಿಗೆ ಸದರಿ ಖಾಯಿಲೆಗೆ ಹಳ್ಳಿ ಔಷಧಿ ಕೊಡಿಸಿರುತ್ತೇವೆ ಎಂದು ಹೇಳುತ್ತಾರೆ. ಇದೇ ನ್ಯಾಯಾಲಯದಲ್ಲಿ ವಾದಿ ಮತ್ತು ನನ್ನ ವಿರುದ್ದ ಒಂದು ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಇದ್ದು ಸದರಿ ಪ್ರಕರಣದಲ್ಲಿ ವಾದಿಯು ನ್ಯಾಯಾಲಯದ ಮುಂದೆ ಹಾಜರಾಗುತ್ತಾರೆ ಎಂದರೆ ಸರಿಯಲ್ಲ.

ದಾವ ಎ ಅನುಸೂಚಿ ಸ್ವತ್ತು ಮೂಲತಃ 4 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ಸಾಕ್ಷಿಯು ಜಂಟಿಯಾಗಿ ಮಂಜೂರಾಗಿದೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಯು ಜಮೀನು ಮಂಜೂರಾತಿಗೆ ಅರ್ಜಿ ಸಲ್ಲಿಸುವ ಕಾಲಕ್ಕೆ ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. 4 ನೇ ಪ್ರತಿವಾದಿಯ ವಿವಾಹ ಯಾವ ವರ್ಷ ನೇರವೇರಿರುತ್ತದೆ ಎಂದರೆ ನೆನಪಿಲ್ಲ. ನಾಗೋಡಿ ಗ್ರಾಮದ ಸರ್ವೆ ನಂ/245 ರಲ್ಲಿ 2 ಎಕರೆ 35 ಗುಂಟೆ ಜಮೀನು ವಾದಿಗೆ ಮಂಜೂರಾಗಿದೆ ಎಂದರೆ ಸರಿ. ಅದೇ ಸರ್ವೆ ನಂಬರ್ ನಲ್ಲಿ 2 ನೇ ಪ್ರತಿವಾದಿಗೆ 4 ಎಕರೆ 20 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಅದೇ ಸರ್ವೆ ನಂಬರ್ ನಲ್ಲಿ 3 ನೇ ಪ್ರತಿವಾದಿಗೆ 3 ಎಕರೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಈ ರೀತಿ ಮೂರು

ಜನರಿಗೆ ಜಮೀನು ಮಂಜೂರಾಗಿರುವ ಬಗ್ಗೆ ಸಾಗುವಳಿ ಚೀಟಿ, ಮಂಜೂರಾತಿ ಆದೇಶ, ಹಕ್ಕು ಬದಲಾವಣೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಹಕ್ಕು ಬದಲಾವಣೆ ಆದೇಶ, ತಹಶೀಲ್ದಾರವರ ಆದೇಶ, ಸಾಗುವಳಿ ಚೀಟಿ, ರಾಜಸ್ವ ನೀರಿಕ್ಷಕರ ವರದಿ, ನೋಟಿಸು, ನಕ್ಷೆ, ಫಲಾನುಭವಿಗಳ ಪಟ್ಟಿ ಮತ್ತು ಅಹವಾಲು ತಖ್ತೆ ಯ ಧೃಡಿಕೃತ ನಕಲುಗಳನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಗಳನ್ನು ಒಪ್ಪಿಕೊಂಡಿರುವುದರಿಂದ ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ ನಿಡಿ-8 ಎಂದು ಗುರುತಿಸಲಾಯಿತು. ಜಮೀನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವ ಕಾಲಕ್ಕೆ ವಾದಿಗೆ 16 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ವಾದಿಯು ಎಷ್ಟನೇ ಇಸವಿಯಲ್ಲಿ ಜನಿಸಿರುತ್ತಾರೆ ಎಂದರೆ ನೆನಪಿಲ್ಲ. ವಾದಿಯು 1982 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಜಮೀನು ಮಂಜೂರಾತಿ ಕಾಲಕ್ಕೆ ವಾದಿ, 2 ಮತ್ತು 3 ನೇ ಪ್ರತಿವಾದಿಯವರು ಒಟ್ಟಿಗೆ ಬೇಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಪ್ರತ್ಯೇಕ ಬೇಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಯಾವ ವರುಷದಿಂದ ಪ್ರತ್ಯೇಕ ಬೇಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸುಮಾರು 20 ವರ್ಷ ಆಯಿತು ಎಂದು ಹೇಳುತ್ತಾರೆ. ವಾದಿ, 2 ಮತ್ತು 3 ನೇ ಪ್ರತಿವಾದಿಯರಿಗೆ ಮಂಜೂರು ಆಗಿರುವ ಆಸ್ಥಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ದಾವ ಎ ಅನುಸೂಚಿ ಸ್ವತ್ತು 4 ನೇ ಪ್ರತಿವಾದಿಗೆ ಬಗರಹುಕುಂ ಅಡಿಯಲ್ಲಿ ಮಂಜೂರಾಗಿದೆ ಎಂದರೆ ಸರಿ. ಸದರಿ ಜಮೀನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವ ಕಾಲಕ್ಕೆ 4 ನೇ ಪ್ರತಿವಾದಿಗೆ ವಿವಾಹ ಆಗಿತ್ತು ಎಂದರೆ ಸರಿಯಲ್ಲ.

ಹಕ್ಕು ಖುಲಾಸೆ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸಾಕ್ಷಿಯು ಹಿಸ್ಸೆ ಪತ್ರ ಎಂದು ಹೇಳಿ 4 ನೇ ಪ್ರತಿವಾದಿಯು ವಾದಿಯನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ಹೇಳುತ್ತಾರೆ. ದಾವ ಎ ಅನುಸೂಚಿ ಸ್ವತ್ತು 4 ನೇ ಪ್ರತಿವಾದಿಗೆ ಸೇರಬೇಕೆಂದು ವಾದಿ

ಮತ್ತು 1 ರಿಂದ 3 ನೇ ಪ್ರತಿವಾದಿಯರು ತಮ್ಮ ಸಮ್ಮತಿ ಮೇರೆಗೆ 4 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರ ಬರೆಸಿಕೊಟ್ಟ ನಂತರ ನಾನು ಮತ್ತು ನನ್ನ ಮಕ್ಕಳ ಪರವಾಗಿ ಖಾತೆ ಬದಲಾವಣೆಗೆ ತಕರಾರು ಅರ್ಜಿಯನ್ನು ತಹಶೀಲ್ದಾರ್ ಕಛೇರಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಂತರ ನಾವು ಎ.ಸಿ ಕೋರ್ಟಿಗೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಈಗ ಎ.ಸಿ ಕೋರ್ಟಿ ನ ಅದೇಶದ ಧೃಡಿಕೃತ ನಕಲನ್ನು ತೋರಿಸಿದ್ದು ಸಾಕ್ಷಿಯು ಅದನ್ನು ಒಪ್ಪಿಕೊಂಡಿರುವುದರಿಂದ ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

ನಾನು ನನ್ನ ಮಕ್ಕಳ ಪರವಾಗಿ ದಾವ ಎ ಅನುಸೂಚಿ ಸ್ವತ್ತಿನಲ್ಲಿ ಹಿಸ್ಸೆ ಕೋರಿ ಈ ದಾವೆಯ ವಾದಿ ಮತ್ತು ಪ್ರತಿವಾದಿಯರ ವಿರುದ್ದ ಓ.ಎಸ್ ನಂ/129/2022 ರಂತೆ ಹಿಸ್ಸೆ ದಾವೆ ಹೊಸನಗರ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯ 4 ನೇ ಪ್ರತಿವಾದಿಯು ಸದರಿ ದಾವೆಯಲ್ಲಿ 3 ನೇ ಪ್ರತಿವಾದಿ ಆಗಿದ್ದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 4 ನೇ ಪ್ರತಿವಾದಿಯು ಹಕ್ಕು ಖುಲಾಸೆ ಪತ್ರವನ್ನು ಪ್ರತಿಪಾದಿಸಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹಕ್ಕು ಖುಲಾಸೆ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಓ.ಎಸ್ ನಂ-129/22 ರ ವಾದಪತ್ರ, 3 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಮಧ್ಯಂತರ ಅರ್ಜಿಯ ಜೆರಾಕ್ಸ ಪ್ರತಿಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ಒಪ್ಪಿಕೊಂಡಿರುವುದರಿಂದ ಅವುಗಳನ್ನು ಕ್ರಮವಾಗಿ ನಿಡಿ-10 ರಿಂದ 12 ಎಂದು ಗುರುತಿಸಲಾಯಿತು. ಓ.ಎಸ್/129/22 ರ ದಾವೆಯನ್ನು ನಾವು ಉಭಯಪಕ್ಷಗಾರರು ನ್ಯಾಯಾಲಯದ ಆಚೆ ಇತ್ಯರ್ಥ್ಯ ಪಡಿಸಿಕೊಂಡಿರುತ್ತೇವೆಂದು ನಾನು ನನ್ನ ಮಕ್ಕಳ ಪರವಾಗಿ ಮೆಮೊಗೆ ಸಹಿ ಹಾಕಿ ನ್ಯಾಯಾಲಯಕ್ಕೆ ಸಲ್ಲಿಸಿ ಸದರಿ ದಾವೆಯನ್ನು ಇತ್ಯರ್ಥ್ಯ ಪಡಿಸಿಕೊಂಡಿರುತ್ತೆವೆ ಎಂದರೆ ಸರಿ. ಸಾಕ್ಷಿಯು ಮುಂದುರೆದು ನಮಗೆ 5 ಲಕ್ಷ ಹಣ

ಕೊಡುವುದಾಗಿ ಹೇಳಿದ್ದು, ಸದರಿ ಹಣ ನಮಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಮಗೆ 5 ಲಕ್ಷ ಹಣ ಕೊಡುವುದಾಗಿ ಯಾರು ಹೇಳಿದ್ದರು ಎಂದರೆ ಸಾಕ್ಷಿಯು 4 ನೇ ಪ್ರತಿವಾದಿಯ ಪರವಾಗಿ 1 ನೇ ಪ್ರತಿವಾದಿ ಸದರಿ ಹಣ ಕೊಡುವುದಾಗಿ ಹೇಳಿದ್ದರು ಎಂದು ಹೇಳುತ್ತಾರೆ. ಆ ಬಗ್ಗೆ ಬರವಣಿಗೆ ಆಗಿಲ್ಲ ಎಂದರೆ ಸರಿ. ಅಸಲು ದಾವ ಓ.ಎಸ್/129/22 ರನ್ನು ದಾಖಲಿಸುವುದಕ್ಕಿಂತ ಪೂರ್ವದಲ್ಲಿ ಈ ದಾವೆಯ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರು 4 ನೇ ಪ್ರತಿವಾದಿಯರಿಗೆ ಹಕ್ಕು ಖುಲಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಓ.ಎಸ್/129/22 ನ್ನು ವಾಪಸ್ಸು ತೆಗೆದುಕೊಳ್ಳಲು ನನ್ನ ಗಂಡನ ಸಹಮತಿ ಇತ್ತು ಎಂದರೆ ಸರಿಯಲ್ಲ. ನಾವು ಓ.ಎಸ್ ನಂ-129/22 ರಲ್ಲಿ ದಾವೆಯನ್ನು ವಾಪಸ್ಸು ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದಾಗ ನನ್ನ ಗಂಡ ಸದರಿ ದಾವೆಯನ್ನು ಮುಂದುವರೆಸುತ್ತೇನೆಂದು ನ್ಯಾಯಾಲಯಕ್ಕೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ಈ ದಾವೆಯಲ್ಲಿ ಓ.ಎಸ್ ನಂ-129/22 ರ ಸಂಗತಿಗಳನ್ನು ಬರೆಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ಗಂಡ ಮತ್ತು ನಮ್ಮ ಇಬ್ಬರ ಮಕ್ಕಳು ಎಲ್ಲಾರು ಒಟ್ಟಿಗೆ ಇದ್ದೇವೆ ಎಂದರೆ ಸರಿ. ಮನೆಯ ವ್ಯವಹಾರವನ್ನು ಯಾರು ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ಮನೆಯ ಹೊರಗೆ ಯಾವುದೇ ವ್ಯವಹಾರ ಮಾಡಿಕೊಂಡರೆ ಮನೆಯಲ್ಲಿ ಗಂಡನಿಗೆ ಹೇಳುತ್ತೇನೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡಲು ಮತ್ತು 4 ನೇ ಪ್ರತಿವಾದಿಗೆ ಸೇರಿದ ದಾವ ಎ ಅನುಸೂಚಿ ಸ್ವತ್ತನ್ನು ಕಬಳಿಸಲು ನಾನು ಮತ್ತು ನನ್ನ ಗಂಡ ಶರೀಖ್ ಆಗಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.